ಅಹಿಂಸೆಯಿಂದ ಸುಖ, ತ್ಯಾಗದಿಂದ ಶಾಂತಿ, ಭಕ್ತಿಯಿಂದ ಪ್ರಗತಿ, ಧ್ಯಾನದಿಂದ ಮುಕ್ತಿ

# ಗೊಮ್ಮಟವಾಣಿ

44ನೇ ವರ್ಷದ ಪ್ರಕಾಶನದಲ್ಲಿ

ಅಂತಿಮ ಶ್ರುತಕೇವಲಿ ಶ್ರೀ ಭದ್ರಬಾಹು ಚರಣ

ಸ್ಥಾಪನೆ : 01.01.1980 ಧಾರ್ಮಿಕ ಪಾಕ್ಷಿಕ ಪತ್ರಿಕೆ

ದಿನಾಂಕ : 01.10.2023 : ಶ್ರವಣಬೆಳಗೊಳ ಪ್ರಧಾನ ಸಂಪಾದಕರು : ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ವೀರಸಂವತ್ : 2549 ಪುಟಗಳು : 4

ಸಂಪುಟ : 17 ಸಂಚಿಕೆ : 19 ಸೋಪಾನ : 1046 RNI No. KARKAN/2008/28274 Postal Regn. No. HSN/765/2021-23 WPP : No. SK/wpp/HSN-109/2021-23

## ಜಿನಭಾಷಿತ

ಣಾಲಸ್ಸೇಣ ಸಮಂ ಸುಕ್ಖಂ, ಣ ವಿಜ್ಜಾ ಸಹ ಣಿದ್ದಯಾ ।
ಣಾ ವೇರಗ್ಗಂ ಮಮತ್ತೇಣಂ, ಣಾರಂಭೇಣ ದಯಾಲುಯಾ ॥ ಸಮಣಸುತ್ತಂ, ಅಪ್ಪಮಾದಗಾಹಾ–8

ಆಲಸ್ಯ ರಹಿತನಿಗೆ ನಿಜವಾದ ಸುಖವಿದೆ.
ನಿದ್ರೆವುಳ್ಳವನಿಗೆ ಜ್ಞಾನ ಲಭಿಸುವುದಿಲ್ಲ.
ಮಮತ್ವ ಇದ್ದವನಿಗೆ ವೈರಾಗ್ಯವಿಲ್ಲ ಮತ್ತು
ಹಿಂಸಕನಿಗೆ ದಯಾಳುತನ ಇಲ್ಲ.

## ಶ್ರೀಕ್ಷೇತ್ರ ಶ್ರವಣಬೆಳಗೊಳ

: ವಿಂಧ್ಯಗಿರಿ ದರ್ಶನದ ಸಮಯ :
ಬೆಳಗ್ಗೆ 6–30 ರಿಂದ ಸಂಜೆ 6–00ರವರೆಗೆ
ಪೂಜಾ ಸಮಯ
ಬೆಳಗ್ಗೆ 8–00 ರಿಂದ ಬೆಳಗ್ಗೆ 10–00ರವರೆಗೆ
ದೂರವಾಣಿ : 9008954636

: ಶ್ರೀಮಠ ದರ್ಶನ ಸಮಯ :
ಬೆಳಗ್ಗೆ 6–30 ರಿಂದ ರಾತ್ರಿ 8–00ರವರೆಗೆ
ಪೂಜಾ ಸಮಯ
ಬೆಳಗ್ಗೆ 7–00 ರಿಂದ ಬೆಳಗ್ಗೆ 9–00ರವರೆಗೆ
ದೂರವಾಣಿ : 9844143722

: ಸ್ವಾಮೀಜಿಯವರ ಕಛೇರಿ :
ದೂರವಾಣಿ : 9380771024

ಶ್ರೀಮಠದ ಕಛೇರಿ–ದೂ. : 8431560480

: ವಸತಿ ವಿಭಾಗ ಕಛೇರಿ:
ದೂರವಾಣಿ : 9353667645

ವರ್ಣಮುದ್ರಿತ ಗೊಮ್ಮಟವಾಣಿ ಪತ್ರಿಕೆ ನಿಮ್ಮ ಮನೆಗೆ ತಲುಪುತ್ತಿಲ್ಲವೇ....?
ಸಂಪರ್ಕಿಸಿ : 8660118443
ವಾರ್ಷಿಕ ಚಂದಾ : ರೂ. 250–00
ಆಜೀವ ಸದಸ್ಯತ್ವ : ರೂ. 2,500–00

ಶ್ರೀಕ್ಷೇತ್ರಕ್ಕೆ ಆಹಾರ, ಔಷದ, ವಿದ್ಯಾದಾನಕ್ಕೆ ಈ ಕೆಳಕಂಡ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ದಾನ ನೀಡಬಹುದು

Paytm G Pay PhonePe

## ಆ.ಶಾಂತಿಸಾಗರ ಮಹಾರಾಜರ ಪುಣ್ಯಸ್ಮರಣೆ




ಶ್ರವಣಬೆಳಗೊಳ, ಸೆ. 17 : ಆಚಾರ್ಯ 108 ಶ್ರೀ ಶಾಂತಿಸಾಗರ ಮಹಾರಾಜರ 68ನೇ ಪುಣ್ಯಸ್ಮರಣೆ ಕಾರ್ಯಕ್ರಮವು ಪಟ್ಟಣದ ಶಾಂತಿಸಾಗರ ಭವನದಲ್ಲಿ ಪ.ಪೂ. ತ್ಯಾಗಿವೃಂದ ಹಾಗೂ ಪೂ. ಶ್ರೀಗಳವರ ಸಾನ್ನಿಧ್ಯದಲ್ಲಿ ನೆರವೇರಿತು.

## ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ದಶಲಕ್ಷಣ ಪರ್ವ ಹಾಗೂ ಕಲ್ಪದ್ರುಮ ಮಹಾಭಿಷೇಕ ಪೂಜಾ ಕಾರ್ಯಕ್ರಮ







ಶ್ರವಣಬೆಳಗೊಳ : ದಶಲಕ್ಷಣ ಮಹಾಪರ್ವದ ಅಂಗವಾಗಿ ಶ್ರೀಕ್ಷೇತ್ರ ಶ್ರವಣಬೆಳಗೊಳದ ಭಂಡಾರಿ ಬಸದಿಯ ಚವ್ವೀಸ ತೀರ್ಥಂಕರರಿಗೆ ಪ.ಪೂ. ಸಮಸ್ತ ಸಾಧುವೃಂದದ ಸಾನ್ನಿಧ್ಯ ಹಾಗೂ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ನೇತೃತ್ವದಲ್ಲಿ ಸೆಪ್ಟೆಂಬರ್ 20 ರಿಂದ 29ರವರೆಗೆ ಹತ್ತು ದಿನಗಳ ಕಾಲ ಸಮಸ್ತ ಜನರ ಆತ್ಮ ಕಲ್ಯಾಣಕ್ಕೆ ಕಾರಣವಾಗುವ ದಶಲಕ್ಷಣ ಪರ್ಯೂಷಣ ಪರ್ವ ಹಾಗೂ ಕಲ್ಪದ್ರುಮ ಮಹಾಭಿಷೇಕ ನೆರವೇರಿತು.

ಪ್ರತಿ ದಿನ ಬೆಳಿಗ್ಗೆ ಬಂಡಾರಿ ಬಸದಿಯಲ್ಲಿ ಚತುರ್ವಿಂಶತಿ ತೀರ್ಥಂಕರರಿಗೆ ಕಲ್ಪದ್ರುಮ ಮಹಾಭಿಷೇಕ ಪೂಜೆ, ಮಧ್ಯಾಹ್ನ ಚಾವುಂಡರಾಯ ಸಭಾ ಮಂಟಪದ ಸಮವಸರಣ ಮಂದಿರದಲ್ಲಿ ಅರಿಹಂತ ಪರಮೇಷ್ಠಿಗಳ ಹಾಗೂ ಮಾತೆ ಜಿನವಾಣಿ ಅಷ್ಟವಿಧಾರ್ಚನೆ ಪೂಜೆ ತತ್ವಾರ್ಥಸೂತ್ರ ವಾಚನ ಮತ್ತು ಅರ್ಥವಿವರಣೆ ಹಾಗೂ ಪ.ಪೂ. ತ್ಯಾಗಿಗಳು ಮತ್ತು ಪೂ. ಸ್ವಸ್ತಿಶ್ರೀ ಶ್ರೀಗಳವರಿಂದ ಮಂಗಲ ಪ್ರವಚನ, ರಾತ್ರಿ ಧಾರ್ಮಿಕ ಪ್ರಶ್ನೋತ್ತರ ಹಾಗೂ ಸಂಗೀತಮಯ ಆರತಿ ಕಾರ್ಯಕ್ರಮಗಳು ನೆರವೇರಿದವು.

ಪೂಜಾ ವಿಧಿ–ವಿಧಾನಗಳನ್ನು ನಂದಕುಮಾರ್ ಶಾಸ್ತ್ರಿ, ಜಿನೇಶ್‌ಕುಮಾರ್ ಪ್ರತಿಷ್ಠಾಚಾರ್ಯರು ಹಾಗೂ ವಿಮಲ್ ಪಂಡಿತರು ನಡೆಸಿಕೊಟ್ಟರು.

## ಪ.ಪೂ. ಸ್ವಸ್ತಿಶ್ರೀ ಸಿದ್ಧಾಂತಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಶ್ರೀಕ್ಷೇತ್ರಕ್ಕೆ ಭೇಟಿ




ಆರತಿಪುರ ಜೈನ ಮಠದ ಪ.ಪೂ. ಸ್ವಸ್ತಿಶ್ರೀ ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಶ್ರೀಕ್ಷೇತ್ರ ಶ್ರವಣಬೆಳಗೊಳಕ್ಕೆ ಭೇಟಿ ನೀಡಿ ಶ್ರೀಕ್ಷೇತ್ರದಲ್ಲಿ ಜರುಗಿದ ಕಲ್ಪಧ್ರುಮ ಮಹಾಭೀಷೇಕ ಪೂಜೆಯಲ್ಲಿ ಸಾನ್ನಿಧ್ಯ ವಹಿಸಿ ಚತುರ್ವಿಂಶತಿ ತೀರ್ಥಂಕರರಿಗೆ ಅಭಿಷೇಕ ನೆರವೇರಿಸಿದರು.





## ಚಾರುಶ್ರೀ ವಾಣಿ



ಸಂಸ್ಕಾರವೆಂಬುದು ಅಂಗಡಿಯಲ್ಲಾಗಲಿ, ಸಂತೆಯಲ್ಲಾಗಲಿ, ಶಾಲೆಯಲ್ಲಾಗಲಿ ಸಿಗುವ ವಸ್ತುವಲ್ಲ. ಸಾಧು–ಸಂತರ, ಮುನಿಶ್ರೇಷ್ಠರ ಪ್ರವಚನ ಸದ್ಗ್ರಂಥಗಳ ವಾಚನ, ಚಿಂತನ–ಮಂಥನದಿಂದ ಸಂಸ್ಕಾರ ಹೊಂದಲು ಸಾಧ್ಯ.

– ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ

## ಅಭಿನವ ಚಾರುಶ್ರೀ ನುಡಿ



### ಅಂತರಾತ್ಮನ ಸಶಕ್ತಿಯೇ ಧರ್ಮ

ಆತ್ಮವೊಂದು ಮನುಷ್ಯನ ಭವದಲ್ಲಿ ಜನಿಸಿದಾಗ ಅದು ಜನಿಸಿದ ದಿನದಿಂದಲೇ ಅವನ ಕರ್ತವ್ಯ, ನಡವಳಿಕೆ, ಆಳವಡಿಸಿಕೊಳ್ಳಬೇಕಾದ ಗುಣಾವಗುಣಗಳ ಬಗ್ಗೆ ಅವನೊಂದಿಗಿನ ಪರಿಸರವು ಜಾಗೃತಿಯನ್ನು ಮೂಡಿಸುತ್ತಿರುತ್ತದೆ. ಯಾರು ಅದನ್ನು ಅಳವಡಿಸಿಕೊಂಡು ಮುನ್ನಡೆದು, ಬದುಕನ್ನು ಸಾರ್ಥಕ ಮಾಡಿಕೊಳ್ಳುತ್ತಾರೋ ಅವರು ನಿಶ್ಚಿತವಾದ ಗುರಿಯನ್ನು ತಲುಪುತ್ತಾರೆ. ಆದರೆ ಅಧರ್ಮದ ಹಾದಿಯ–ನ್ನಿಡಿದು ನೆಡೆದವರು ನಿಶ್ಚಿತವಾದ ಗುರಿಯನ್ನು ತಲುಪದೆ ಸಂಕಷ್ಟದಲ್ಲಿ ಸಿಲುಕುತ್ತಾರೆ.

ಜಿನನ ಸಂದೇಶದಂತೆ ಧರ್ಮವು ಪ್ರಾಕೃತಿಕವಾಗಿದ್ದು, ಸಮಂತಭದ್ರರು ಹೇಳಿರುವಂತೆ 'ವಸ್ತುವಿನ ಸ್ವಭಾವವೇ ಧರ್ಮ'ವಾಗಿದೆ. ಪ್ರತಿಯೊಬ್ಬನು ತಾನು ನಂಬಿದ ಧರ್ಮವನ್ನು ಶ್ರದ್ದೆಯಿಂದ ಪಾಲಿಸುತ್ತಾ, ಪ್ರೀತಿ ಸಹಬಾಳ್ವೆಯನ್ನು ತೋರುತ್ತಾ, ಪರರಿಗೆ ನೋವನ್ನುಂಟುಮಾಡದೇ, ಕ್ರೋಧ, ಮಾನ, ಮಾಯಾ, ಲೋಭಗಳೆಂಬ ಕಷಾಯಗಳ ಸುಳಿಯಲ್ಲಿ ಸಿಲುಕದೆ ಅಹಿಂಸೆ, ಸತ್ಯ, ಸಂಯಮ, ಮೈತ್ರಿಯನ್ನು ಸಾಧಿಸುತ್ತಾ, ಆತ್ಮನನ್ನು ಪರಿಶುದ್ಧಗೊಳಿಸುವ ಅಂತರಾತ್ಮನ ಸಶಕ್ತಿಯ ಸ್ವರೂಪವೇ ಧರ್ಮವಾಗಿದೆ.

– ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ

## ಕಂಬದಹಳ್ಳಿ ಶ್ರೀಗಳವರಿಂದ ಭಕ್ತಿಯ ವಿನಯಾಂಜಲಿ

ಶ್ರವಣಬೆಳಗೊಳ, ಸೆ. 26 : ಕಂಬದಹಳ್ಳಿ ಜೈನ ಮಠದ ಪ.ಪೂ. ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಶ್ರೀಕ್ಷೇತ್ರ ಶ್ರವಣಬೆಳಗೊಳಕ್ಕೆ ಭೇಟಿ ನೀಡಿ ಪ್ರಾತಃಸ್ಮರಣೀಯ ಪ.ಪೂ. ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯ ಆಶಯದಂತೆ ನೂತನವಾಗಿ ಉದ್ಘಾಟನೆಗೊಂಡಿರುವ ಕರ್ಮಯೋಗಿ ಚಾರುಶ್ರೀ ತೋಟದಲ್ಲಿ ಗಿಡಗಳನ್ನು ನೆಡುವ ಮೂಲಕ ಭಕ್ತಿ ವಿನಯಾಂಜಲಿ ಸಲ್ಲಿಸಿದರು.

## ಮಾಜಿ ಸಚಿವ ಅಭಯಚಂದ್ರ ಜೈನ್‌ರ ಭೇಟಿ




ಶ್ರವಣಬೆಳಗೊಳ. ಸೆ. 14 : ಮಾಜಿ ಸಚಿವ ಅಭಯಚಂದ್ರ ಜೈನ್‌ರವರು ಶ್ರೀಕ್ಷೇತ್ರ ಶ್ರವಣಬೆಳಗೊಳಕ್ಕೆ ಭೇಟಿ ನೀಡಿ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಅಶೀರ್ವಾದ ಪಡೆದರು.

## ಮೈಸೂರು ಜಿಲ್ಲಾಧಿಕಾರಿಗಳ ಭೇಟಿ



ಶ್ರವಣಬೆಳಗೊಳ. ಸೆ. 24 : ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರರವರು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿ ಭ. ಶ್ರೀ ಬಾಹುಬಲಿ ಸ್ವಾಮಿಯ ದರ್ಶನ ಪಡೆದರು. ನಂತರ ಜೈನ ಮಠದ ಪೀಠಾಧಿಪತಿಗಳಾದ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

## ಸಲ್ಲೇಖನ ಪೂರ್ವಕ ಸಮಾಧಿ ಮರಣ



ಗಣಧರಾಚಾರ್ಯ 108 ಶ್ರೀ ಕುಂಥುಸಾಗರ ಮಹಾರಾಜರ ಶಿಷ್ಯ ದೀರ್ಘೋಪವಾಸಿ ತಪಸ್ಸಿನ ಮಹಾಸಾಗರವಾಗಿರುವ ನಿಶ್ಚಯಗಿರಿಯ ಪ್ರವರ್ತಕ, ತಪಸ್ವಿ ರತ್ನಾಕರ ಪರಮಪೂಜ್ಯ 108 ಆಚಾರ್ಯ ಶ್ರೀ ನಿಶ್ಚಯಸಾಗರ ಮಹಾರಾಜರ ಸಲ್ಲೇಖನಾ ಪೂರ್ವಕ ಸಮಾಧಿ ಮರಣವಾಗಿರುವುದರಿಂದ ಜೈನ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ದಿಗಂಬರ ಜೈನ ಪರಂಪರೆಯ ಪ್ರಥಮಾಚಾರ್ಯ ಪ.ಪೂ. ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರ ನಂತರ ಅನೇಕ ಸಾಧುಗಳು ಉಪವಾಸ ತಪಗಳಿಂದ ತಮ್ಮ ಆತ್ಮ ಕಲ್ಯಾಣ ಮಾರ್ಗ ಆರಿಸಿಕೊಂಡರು. ಅವರುಗಳಲ್ಲಿ ತಪಸ್ವೀ ಆಚಾರ್ಯ ಶ್ರೀ ನಿಶ್ಚಯಸಾಗರ ಮಹಾರಾಜರ ಹೆಸರು ಸುವರ್ಣಾಕ್ಷರಗಳಲ್ಲಿ ಅಂಕಿತವಾಗಿದೆ. ತಮ್ಮ ಸಂಯಮ ಜೀವನದಲ್ಲಿ ಸುಮಾರು ಆರು ಸಾವಿರ ಉಪವಾಸ ಮಾಡಿರುವ ಈ ಮಹಾ ತಪಸ್ವಿಗೆ ಶೀಕ್ಷೇತ್ರ ಶ್ರವಣಬೆಳಗೊಳ ಸವಿನಯ ನಮೋಸ್ತುಗಳನ್ನು ಅರ್ಪಿಸುತ್ತಾ ಶ್ರದ್ಧಾಂಜಲಿಯನ್ನು ಸಮರ್ಪಿಸತ್ತದೆ. ಪಾವನ ಚರಣಗಳಲ್ಲಿ ಕೋಟಿ ಕೋಟಿ ನಮೋಸ್ತುಗಳು.

**ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರೀಕ್ಷೇತ್ರ ಶ್ರವಣಬೆಳಗೊಳ**

## ವಿದ್ಯಾಪೀಠದ ವಿದ್ಯಾರ್ಥಿಗಳಿಗೆ ಪ್ರಾಕೃತ ಪ್ರವೇಶ



**ಶ್ರವಣಬೆಳಗೊಳ** : ಶ್ರೀ ಗೊಮ್ಮಟೇಶ್ವರ ವಿದ್ಯಾಪೀಠದ ವಿದ್ಯಾರ್ಥಿಗಳಿಗೆ **ಪ್ರಾಕೃತ ಪ್ರವೇಶ** ತರಗತಿಗೆ ದಾಖಲಾತಿ ಮಾಡಿಕೊಳ್ಳಲಾಯಿತು. ಪರಮಪೂಜ್ಯ ಮುನಿಗಳು ವಿದ್ಯಾರ್ಥಿಗಳಿಗೆ ಪ್ರಾಕೃತ ಪ್ರವೇಶಿಕಾ ಪುಸ್ತಕ ವಿತರಿಸಿ ಆಶೀರ್ವದಿಸಿದರು.

## ವಿಶೇಷ ದಿನಗಳು

**01.10.2023 ಭಾನುವಾರ : ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಸಹಸ್ರಕೂಟ ಜಿನಬಿಂಬದ ಪೂಜೆ**

**06.10.2023 ಶುಕ್ರವಾರ : ಅಷ್ಟಮಿ, ಭ. ಶ್ರೀ ಶಾಂತಿನಾಥ ತೀರ್ಥಂಕರರ ಗರ್ಭಕಲ್ಯಾಣ**

**13.10.2023 ಶುಕ್ರವಾರ : ಚತುರ್ದಶಿ.**

**14.10.2023 ಶನಿವಾರ : ಅಮಾವಾಸ್ಯೆ**

**15.10.2023 ಭಾನುವಾರ : ನವರಾತ್ರಿ ಪ್ರಾರಂಭ**

## ಜೈನ್ ಕ್ವಿಜ್

**: ಪ್ರಶ್ನೆಗಳು :**

1) **ಇವು ಇಂದು ಸಮವಸರಣದ ಪ್ರತೀಕಗಳಾಗಿವೆ**
2) **ಮಾನಸ್ತಂಭದ ಅರ್ಥವೇನು ?**
3) **ಪಂಚ ಕೂಟ ಬಸದಿಗಳು ಎಲ್ಲೆಲ್ಲಿವೆ**
4) **ಜನಿವಾರ ಯಾವುದರ ಸಂಕೇತ ?**
5) **ಶ್ರಾವಕರ ಮೂಲಗುಣಗಳೆಷ್ಟು?**

ಈ ಮೇಲಿನ ಪ್ರಶ್ನೆಗಳಿಗೆ ದಿನಾಂಕ 10–10–2023ರ ಒಳಗೆ ದೂರವಾಣಿ ಸಂಖ್ಯೆ : **8660118443** ಗೆ ವಾಟ್ಸಪ್ ಮೂಲಕ ಸರಿ ಉತ್ತರಗಳನ್ನು ತಮ್ಮ ಹೆಸರು, ವಿಳಾಸದೊಂದಿಗೆ ಕಳುಹಿಸುವುದು.

ಸರಿ ಉತ್ತರ ಕಳುಹಿಸಿದ ಮೊದಲ 5 ಜನರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಹಿಂದಿನ ಸಂಚಿಕೆಯ ಉತ್ತರಗಳು :
1) **ಅನಾದಿನಿಧನ ಮಂತ್ರ** 2) **ಷಟ್ಖಂಡಾಗಮ**
3) **ಪರ್ಯೂಷಣ ಪರ್ವ** 4) **ಶಾಂತಿ, ಕುಂಥು, ಅರ**
5) **ಎಂಟು ಮೂಲ ಗುಣಗಳು**

**ಮೊದಲು ಸರಿ ಉತ್ತರ ಬರೆದವರು :**
1) ಮಂಜುಳಾ ಪ್ರಭಾಕರ್, ಮಾಯಸಂದ್ರ
2) ಅಲಕಾ ಬಾ. ಚಿಕ್ಕೋಡಿ, ಶ್ರವಣಬೆಳಗೊಳ
3) ಗೀತಾ ಆನಂದ್ ಎಂ.ಎನ್., ಮೈಸೂರು
4) ರೀತಾ ಭರತ್ ಆಣೇಕಾರ್, ತುಮಕೂರು
5) ನಿವೇದಿತಾ ಎಂ. ತೋಪಣ್ಣನವರ್, ಮಂಟಗಣಿ

**ಇವರುಗಳಿಗೆ ಶುಭಾಷಯಗಳು**

## ವಿಂಧ್ಯಗಿರಿಯ ಬಾಹುಬಲಿಗೆ ಬೆಳದಿಂಗಳ ಮಜ್ಜನ



**ಬಾನ ತೆರದಲಿ ಭಾವದುಂಧುಬಿಯೊಳು**
**ಚಂದಿರನ ಬಂಧುರ**
**ಬೆಳದಿಂಗಳೆಂಬ ಬೆಳ್ಳಿ ಬಳ್ಳಿ ಬಾಹುಬಲಿಯ ತಬ್ಬಿ ಹಬ್ಬಿರೇ**
**ಭವದ ಭಕುತಿಗೆ**
**ಭಾವಾನುವಾದವದು ಅತಿ ಶ್ರೇಷ್ಠವು.....**
**ವಿಂಧ್ಯಗಿರಿಯ ತುಂಬೆಲ್ಲಾ**
**ವಿರಾಜಿಸಿದಂತೆ ವಿರಾಗಿಯ ಮುಖ ಕಮಲ, ಬೆಳದಿಂಗಳ**
**ಹಾಲ್ನೊರೆಯಲ್ಲಿ ಮಿಂದೇಳಿಸಿದ ವಿನಮ್ರ ಕಾಂತಿ ....**
**ದಿಗಂಬರತನದಿ ನಿಂತ ನಿಮ್ಮ ದಿಟ್ಟ ನಿಲುವಿಗೆ**
**ಬೆರಗಾದಂತೆ, ಮುಗಿಲ ಮೇಘದೊಳಗಿಂದ ಮೇಲ್ಹೈಸಿದಂತೆ**
**ಮರೆತು ನಿಂತಿಹನೇ ಹುಣ್ಣಿಮೆಯ ರಾತ್ರಿಯಲಿ....**
**ಆದಿನಾಥನ ಪ್ರಿಯ ಕಂದನ ಕಣ್ತುಂಬಿಕೊಳ್ಳಲು**
**ಅತಿ ಅವಸರದಿ ಅಡಿ ಇಟ್ಟನೇನೊ ಅರ್ಧ ಆಕೃತಿಯಲಿ,**
**ಅತ್ಯಾಕರ್ಷಣೆಯೊಂದಿಗೆ....**
**ನಸು ನಗುತಿಹನು, ಮುಗುಳ್ನಗೆಯ ಚೆಲ್ಲಿ ಚಂದಮಾಮನಲ್ಲಿ**
**ಪುರುದೇವ ಸುತನ**
**ಪದತಲಕ್ಕೆ ಪದ್ಮ ಪುಷ್ಪಂಗಳ ಅರ್ಪಿಸಿ**
**ಹೊಂಬೆಳಕಿನೊಡಗೂಡಿ**
**ನೀಲನೆಲದ ಪ್ರಕೃತಿಯ ನೋಟದಲಿ....**

**ವಸುಮತಿ ಜೈನ್, ಶ್ರವಣಬೆಳಗೊಳ**

## ಪ್ರಾಕೃತ ಭಾಷಾ ವ್ಯಾಕರಣದ ವಿಭಾಗಗಳು

**ಪ್ರಾಕೃತ** ಭಾಷೆಯನ್ನು ಕಲಿಯಲು ಮತ್ತು ಅರ್ಥ ಮಾಡಿಕೊಳ್ಳಲು ಅದರ ಮೂಲ ತತ್ವಗಳನ್ನು ತಿಳಿದುಕೊಳ್ಳುವುದು ಅವಶ್ಯಕ. ಅವು ಈ ಕೆಳಗಿನಂತಿವೆ.

**1) ಧ್ವನಿ** : ಪುಪ್ಪುಸದಿಂದ ಶ್ವಾಸನಾಳದ ಮೂಲಕ ಬಾಯಿ ಮತ್ತು ಮೂಗಿನ ಹೊಳ್ಳೆಗಳಿಂದ ಹೊರಬರುವ ಗಾಳಿಯು ಶಬ್ದಗಳನ್ನು ಉತ್ಪಾದಿಸುತ್ತದೆ. ಪ್ರತ್ಯೇಕ ಧ್ವನಿಗಾಗಿ ಒಂದು ಭಿನ್ನ ಅಕ್ಷರವನ್ನು ಬಳಸಲಾಗುತ್ತದೆ. ಬಾಯಿಯಿಂದ ಉಸಿರಾಟವನ್ನು ಮಾಡುವಾಗ ಎರಡು ವಿಧಗಳಾಗಿ ಧ್ವನಿಗಳನ್ನು ಪರಿಗಣಿಸಲಾಗುತ್ತದೆ – ಅವು **ಸ್ವರಗಳು** ಮತ್ತು **ವ್ಯಂಜನಗಳು.**

**ಸ್ವರ** : ಯಾವ ಧ್ವನಿಗಳ ಉಚ್ಚಾರಣೆಯಲ್ಲಿ ನಾಲಿಗೆಯು ಉಸಿರನ್ನು ನಿಲ್ಲಿಸದೆ, ಅಡೆತಡೆಯಿಲ್ಲದೆ ಹೊರಬರುವ ಶಬ್ದಗಳಿಗೆ ಸ್ವರ ಎಂದು ಕರೆಯಲಾಗುತ್ತದೆ. ಇವುಗಳ ಉಚ್ಚಾರಣೆ ಯಾವುದೇ ಅಕ್ಷರದ ಸಹಾಯವಿಲ್ಲದೆ ಸ್ವತಂತ್ರವಾಗಿ ಉಚ್ಚರಿಸಲಾಗುತ್ತದೆ.

**ವ್ಯಂಜನ** : ಯಾವ ಧ್ವನಿಗಳ ಉಚ್ಚಾರಣೆ ಬಾಯಿಯಲ್ಲಿ ನಾಲಿಗೆಯಿಂದ ನಿಶ್ವಾಸವನ್ನು ನಿಲ್ಲಿಸಿ ಅದು ಅಲ್ಲಿ ಇಲ್ಲಿ ಉಜ್ಜಿದಾಗ ಹೊರಬರುವ ಶಬ್ದಗಳನ್ನು ವ್ಯಂಜನ ಶಬ್ದಗಳು ಎಂದು ಕರೆಯಲಾಗುತ್ತದೆ.

ಪ್ರಾಕೃತದಲ್ಲಿ **ಙ** ಮತ್ತು **ಞ** ಬಳಕೆಯು ಸಂಯೋಜಿತ ಸ್ಥಿತಿಯಲ್ಲಿ ಕಂಡುಬರುವುದಿಲ್ಲ. **ಙ** ಮತ್ತು **ಞ** ಬದಲಿಗೆ ಸಂಯೋಜಿತ ಸ್ಥಿತಿಯಲ್ಲಿ ಅನುಸ್ವಾರದ ಬಳಕೆ ಹೇರಳವಾಗಿ ಕಂಡುಬರುತ್ತದೆ.

**2) ಚಿನ್ಹೆ** : ಕೆಳಗಿನ ಚಿಹ್ನೆಗಳನ್ನು ಪ್ರಾಕೃತದಲ್ಲಿ ಬಳಸಲಾಗುತ್ತದೆ.

**ಅನುಸ್ವಾರ** : ಸ್ವರದ ಮೇಲೆ ಹಾಕುವ ಬಿಂದುವೇ ಅನುಸ್ವಾರ. ಅನುಸ್ವಾರವನ್ನು ಸ್ವರಗಳಿಲ್ಲದೆ ಬಳಸಲಾ–ಗುವುದಿಲ್ಲ. ಅದನ್ನು ಸ್ವರಗಳ ಸಹಾಯದಿಂದ ಮಾತ್ರ ಉಚ್ಚರಿಸಬಹುದು.

**ಕ ಖ ಗ ಘ ಹ** ಗಿಂತ ಮೊದಲು ಬಂದಿರುವ ಅನುಸ್ವಾರದ ಉಚ್ಚಾರಣೆ **'ಙ'** ರೀತಿಯಲ್ಲಿ ಆಗುತ್ತದೆ ಹಾಗೆ – **ಪಂಕ–ಪಙಕ, ಅಂಗ ಅಙಗಗಳು** ಇತ್ಯಾದಿ.

**ಚ ಛ ಜ ಝ ಯ** ಕ್ಕಿಂತ ಮೊದಲು ಬಂದಿರುವ ಅನುಸ್ವಾರದ ಉಚ್ಚಾರಣೆಯು **ಞ್** ರೀತಿಯಲ್ಲಿ ಆಗುತ್ತದೆ. **ಪಂಚ–ಪಞಚ, ಸಂಯಮ–ಸಞಯಮ** ಇತ್ಯಾದಿ.

**ಟ ಠ ಡ ಢ** ಕ್ಕಿಂತ ಮೊದಲು ಬರುವ ಅನುಸ್ವಾರದ ಉಚ್ಚಾರಣೆ **'ಣ್'** ತರಹ ಆಗುತ್ತದೆ. **ಟಂಟಾ–ಟಂಟಾ, ಅಂಡಾ–ಅಂಡಾ** ಇತ್ಯಾದಿ.

## ಮುನಿ ವಾಣಿ



### ವಿಶೇಷ ಪುಣ್ಯಾರ್ಜನೆಯ ಪರ್ವ

ಧರ್ಮ ಸ್ವರೂಪಿಯಾದ ಆತ್ಮನೇ ಮೋಕ್ಷಕ್ಕೆ ಕಾರಣವಾಗಿರುವುದರಿಂದ, ಆತ್ಮನಲ್ಲಿ ಜೀವನ ಉನ್ನತಿಗೆ ಕಾರಣವಾಗುವ ಗುಣಗಳನ್ನು, ಸ್ವಭಾವಗಳನ್ನು ಜಾಗೃತಗೊಳಿಸಿ ಆತ್ಮ ಕಲ್ಯಾಣಕ್ಕಾಗಿ ಧರ್ಮಾಚರಣೆಯಲ್ಲಿ ತೊಡಗಿರುವವರಿಗೆ ಪುಣ್ಯಾರ್ಜನೆಯ ಮಾರ್ಗ ವಾಗಿರುವ ವಿಶೇಷ ಪರ್ವವೇ ದಶಲಕ್ಷಣ ಪರ್ವವಾಗಿದೆ. ಇದು ಕ್ಷಮಾ,ಮಾರ್ಧವ, ಅರ್ಜವ, ಶೌಚ, ಸತ್ಯ, ಸಂಯಮ, ತಪ,ತ್ಯಾಗ.ಆಕಿಂಚನ್ಯ, ಬ್ರಹ್ಮಚರ್ಯ ಧರ್ಮಗಳಾಗಿವೆ. ಇವು ಆತ್ಮನ ಸ್ವಭಾವಗಳಾಗಿವೆ,

ಹುಲ್ಲಿರದ ಮರುಭೂಮಿಯಲ್ಲಿ ಅಗ್ನಿಯು ತಾನಾಗಿಯೇ ಶಾಂತವಾಗುತ್ತದೋ ಹಾಗೆ ಯಾರ ಕೈಯಲ್ಲಿ ಕ್ಷಮೆ ಎಂಬ ಶಸ್ತ್ರವಿರುತ್ತದೋ ದುರ್ಜನರು ಏನು ಮಾಡಲಾಗುವುದಿಲ್ಲ. ಅದ್ದರಿಂದ ಅಂತಹ ಸಕಲ ಗುಣಗಳ ತಳಹದಿಯಾಗಿರುವುದೇ ಉತ್ತಮಕ್ಷಮಾ ಧರ್ಮವಾಗಿದೆ. ಫಲ ಬಿಡುವ ವೃಕ್ಷವು ಬಾಗುತ್ತದೋ ಹಾಗೇ ಕುಲಜನಾದವನು ಬಾಗುತ್ತಾನೆ.ಆದರೆ ಒಣಗಿದ ಮರ,ದುರ್ಜನ ಎಂದಿಗೂ ಬಾಗುವುದಿಲ್ಲ. ಇದು ಮಾನ ಕಷಾಯದ ಪರಾಕಾಷ್ಠೆ ಯಾಗಿದ್ದು ಯಾರು ಮಾನ ಕಷಾಯವನ್ನು ಹೊರಹಾಕಿ ಕೋಮಲತೆಯಿಂದ ವ್ಯವಹಾರದಲ್ಲಿ ನಮ್ರನಾಗಿರುವುದೇ ಉತ್ತಮ ಮಾರ್ಧವವಾಗಿದೆ.

ಮಹಾತ್ಮರಾದವರು ಮನಸ್ಸಿನಲ್ಲಿರುವಂತೆ ವಚನದಲ್ಲೂ, ವಚನದಲ್ಲಿರುವಂತೆ ಆಚರಣೆಯಲ್ಲೂ ಇರುತ್ತಾರೆ. ಆದರೆ ದುರಾತ್ಮರಾದವರು ಮನಸ್ಸು ವಚನ ಮತ್ತು ಆಚರಣೆಗಳಲ್ಲಿ ಏಕಾನತೆಯನ್ನು ಹೊಂದಿರುವುದಿಲ್ಲ. ಇದರಿಂದಾಗಿ ಧರ್ಮಾಚರಣೆಯಲ್ಲಿ ತೊಡಕಾಗುವುದು.ಅದ್ದರಿಂದ ಮನ ವಚನ ಕಾಯಗಳಲ್ಲಿ ಯಾವುದೇ ವಕ್ರತೆ ಇಲ್ಲದಿರುವುದೇ ಉತ್ತಮ ಆರ್ಜವ ಧರ್ಮವಾಗಿದೆ.

ಧನ, ಸಂಪತ್ತು, ಸ್ತ್ರೀ ಹಾಗೂ ಭೋಜನಗಳಲ್ಲಿ ಯಾರು ಸಂತೃಪ್ತಿ ಹೊಂದುವುದಿಲ್ಲವೋ ಅವನು ದುರ್ಜನ ನೆನೆಸಿಕೊಳ್ಳುತ್ತಾನೆ. ಇದರಿಂದ ಅವನು ಎಲ್ಲಾ ರೀತಿಯ ಸಂಕಟಗಳಲ್ಲಿ ಬೀಳುತ್ತಾನೆ. ಅದ್ದರಿಂದ ಇವುಗಳ ಮೇಲಿನ ಮಮತ್ವವನ್ನು ಹೃದಯದಿಂದ ದೂರ ಮಾಡುವುದೇ ಉತ್ತಮ ಶೌಚ ಧರ್ಮವಾಗಿದೆ.

ಪ್ರಿಯವಾದ ಮಾತುಗಳನ್ನಾಡುವುದರಿಂದ ಜಂತುಗಳು ಸಹ ಸಂತೋಷ ಭರಿತವಾಗುತ್ತವೆ. ಅದ್ದರಿಂದ ಪ್ರಿಯವಾದ ಮಾತುಗಳನ್ನೇ ಆಡಬೇಕು. ಅಂತಹ ಮಾತುಗಳನ್ನಾಡಲು ದರಿದ್ರತೆ ತೋರಬಾರದು. ಅಂತರಾತ್ಮನ ಶುದ್ಧವಾಣಿ ಸತ್ಯವಚನವೇ ಆಗಿರುವುದರಿಂದ ಸತ್ಯವನ್ನೆ ಮಾತಾನಾಡಬೇಕು.ಇದೇ ಉತ್ತಮ ಸತ್ಯಧರ್ಮವಾಗಿದೆ.

ಸಂಯಮವಿಲ್ಲದ ಮನುಷ್ಯನನ್ನು ಪಶು ಸಮಾನ ಎನ್ನಲಾಗಿದೆ. ಅದ್ದರಿಂದ ಮನುಷ್ಯ ಸಂಯಮರೂಪದ ಪಾಠಶಾಲೆಯನ್ನು ಪ್ರವೇಶಿಸದಿದ್ದರೆ ಅವನಲ್ಲಿ ಉಜ್ವಲವಾದ ವ್ಯಕ್ತಿತ್ವ ರೂಪಗೊಳ್ಳುವುದಿಲ್ಲ. ಅದ್ದರಿಂದ ವಿಕಲ್ಪಗಳಿಂದ ಆತ್ಮನನ್ನು ಬಿಡುಗಡೆಗೊಳಿಸುವುದೇ ಉತ್ತಮ ಸಂಯಮ ಧರ್ಮವಾಗಿದೆ.

ಇಚ್ಚೆಗಳನ್ನು ನಿರೋಧ ಮಾಡುವುದೇ ತಪವಾಗಿದೆ. ಭಾವಗಳಲ್ಲಿ ಸಮಸ್ತ ಇಚ್ಚೆಗಳನ್ನು ತ್ಯಾಗ ಮಾಡಿ ಸ್ವಸ್ವರೂಪದಲ್ಲಿ ಲೀನ ನಾಗುವುದು ಉತ್ತಮ ತಪವಾಗಿದ್ದೂ, ಜೀವನ ಔನತ್ಯದ ಕಡೆಗೆ ಕರೆದ್ಯೋಯಲು ತಪವು ಉತ್ತಮ ಮಾರ್ಗವಾಗಿದೆ.

ತ್ಯಾಗದಿಂದ ಶಾಂತಿ ಸಿಗುತ್ತದೆ. ಯಾವ ಜೀವವೂ ಪರದ್ರವ್ಯಗಳ ಮೇಲಿನ ಮೋಹವನ್ನು ತೊರೆದು, ಸಮಸ್ತವನ್ನು ತ್ಯಾಗ ಮಾಡುವುದೇ ಉತ್ತಮ ತ್ಯಾಗ ಧರ್ಮವಾಗಿದೆ. ಈ ರೀತಿಯ ಭಾವನೆ ಮಾಡುವುದು ತೀರ್ಥಂಕರ ಪ್ರಕೃತಿ ಬಂಧಕ್ಕೆ ಕಾರಣವಾಗುತ್ತದೆ.

ಯಾವುದೇ ವಸ್ತುಗಳ ಮೇಲೆ ಕಿಂಚಿತ್ ಪರಿಗ್ರಹ ವಿಲ್ಲದಿರುವುದು ಆಕಿಂಚನ್ಯವಾಗಿದೆ. ಮಮತೆ ಯಾರಲ್ಲಿ ಇರುತ್ತದೋ, ಅವರು ಬಂಧನಕ್ಕೊಳಪಡುತ್ತಾರೆ.ನಿರ್ಮಮತೆಯು ಯಾರಲ್ಲಿ ಇರುತ್ತದೋ, ಅವರು ಮೋಕ್ಷ ಪಡೆಯುತ್ತಾರೆ. ಅದ್ದರಿಂದ ಆಕಾಂಕ್ಷೆಗಳ ನಿಯಂತ್ರಣ ಮಾಡುವುದೇ ಉತ್ತಮ ಆಕಿಂಚನ್ಯವಾಗಿದೆ.

ಆತ್ಮನಲ್ಲಿ ಶಾಶ್ವತವಾದ ಆನಂದ ಸ್ವರೂಪವಾಗಿರುವುದು. ಕೇವಲ ತನ್ನ ಶುದ್ಧಾತ್ಮ ನಲ್ಲಿ ಚರಿಸುವುದು, ಅತಿಚಾರ ರಹಿತ ಶೀಲವನ್ನು ಪರಿಪಾಲಿಸುವುದನ್ನು ಉತ್ತಮ ಬ್ರಹ್ಮಚರ್ಯ ಎನ್ನಲಾಗುತ್ತದೆ.

ಶ್ರಾವಕರು ಪರಮ ಪವಿತ್ರವಾದ ದಶಧರ್ಮಗಳ ಸಂಸ್ಕಾರ ಹೊಂದಿ ಆತ್ಮಕಲ್ಯಾಣಕ್ಕೆ ದಾರಿ ಮಾಡಿಕೊಡುವುದೇ ಪರಮ ಕರ್ತವ್ಯವಾಗಿದೆ, ಇದೇ ದಶಧರ್ಮಗಳ ಪಾಲನೆಯಾಗಿದೆ.

**– ಪರಮ ಪೂಜ್ಯ 108 ಶ್ರೀ ಅಮೋಘ ಕೀರ್ತಿ ಮುನಿಗಳು**


## ಧಾರ್ಮಿಕ ಜಿನ ಪದಬಂಧ–02

**ಮೇಲಿನಿಂದ ಕೆಳಕ್ಕೆ**

1) ಚೈತನ್ಯ ಗುಣಗಳಿಲ್ಲದ ದ್ರವ್ಯ (3)
2) ಭಗವಾನ್ ಬಾಹುಬಲಿಯು ಇದರಿಂದ ಶಾಂತಿ ಎಂದು ಸಾರಿದ್ದಾರೆ(2)
3) ಸಮವಸರಣದಲ್ಲಿ ಭವ್ಯ ಜೀವಿಗಳಿಗೆ ಉಪದೇಶ ನೀಡುವ ಪರಮೇಷ್ಠಿಗಳು (4)
4) ದಿಗಂಬರ ಜೈನ ಸಿದ್ಧಾಂತದಲ್ಲಿರುವ ಅಂಗಗಳ ಸಂಖ್ಯೆ (4)
5) ಭಗವಾನ್ ಪಾರ್ಶ್ವನಾಥ ತೀರ್ಥಂಕರರ ಮಾತೆಯ ಹೆಸರು (4)
8) ಪಂಚೌದುಂಬರ ಫಲ ತ್ಯಾಗಗಳಲ್ಲಿ ಇದು ತಲೆ ಕೆಳಗಾಗಿದೆ (2)
11) ಭಗವಾನ್ ಬಾಹುಬಲಿಯ ಹಿರಿಯ ಸಹೋದರ (3)
12) ಸಮವಸರಣದಲ್ಲಿ ತೀರ್ಥಂಕರ ಭಗವಾನರು ವಿರಾಜಮಾನರಾಗುವ ಮಂಟಪ (4)
14) 14 ಮಹಾನದಿಗಳಲ್ಲಿ ಒಂದಾದ ಇದು ರಾಮನ ಪತ್ನಿಯ ಹೆಸರನ್ನು ಹೊಂದಿದ್ದು, ತಿರುಗಿದೆ.(2)
15) ಪಂಚ ಪಾಪಗಳಲ್ಲಿ ಒಂದು (3)
16) ದ್ರವ್ಯ ಕರ್ಮದ 2 ವಿಧಗಳಲ್ಲಿ ಒಂದಾದ ಇದು ಔದಾರಿಕಾದಿ ಶರೀರವನ್ನು ಉಂಟುಮಾಡುವ ಕರ್ಮ(3)

**ಎಡದಿಂದ ಬಲಕ್ಕೆ**

1) ಸಂಸಾರದ ಎಲ್ಲಾ ಪದಾರ್ಥಗಳು ಅಶಾಶ್ವತ ಎಂದು ಚಿಂತಿಸುವುದು ಈ ಅನುಪ್ರೇಕ್ಷೆಯಾಗಿದೆ (3)
3) ಪಂಚವ್ರತಗಳಲ್ಲಿ ಒಂದಾದ ಇದು ಅತಿಯಾದ ಆಕಾಂಕ್ಷೆಯನ್ನು ತೊರೆಯುವುದು. (5)
6) ಗರ್ವ,ಅಹಂಕಾರ, ಮದಗಳನ್ನು ತ್ಯಜಿಸಿ ಪಾಲಿಸುವ ಧರ್ಮ (3)
7) ವರ್ತಮಾನ ಕಾಲದ 10ನೆಯ ತೀರ್ಥಂಕರರು (3)
9) 18 ದೋಷಗಳಲ್ಲಿ ಒಂದಾದ ಇದು ಆಶ್ಚರ್ಯಕರವಾಗಿದೆ. (3)
10) ಭಗವಾನ್ ಅಜಿತನಾಥ ತೀರ್ಥಂಕರರ ಲಾಂಛನ (2)
13) ಭೂತಕಾಲದ 24 ತೀರ್ಥಂಕರರುಗಳಲ್ಲಿ 24 ನೇಯ ತೀರ್ಥಂಕರರು (2)
15) ಭಗವಾನ್ ಪಾರ್ಶ್ವನಾಥರ ಯಕ್ಷಿ ಪದ್ಮಾವತೀ ದೇವಿಯ ವಾಹನ (5)
17) ಪ್ರಜೆಗಳಿಗೆ ಕುಲದ ಬಗ್ಗೆ ಪರಿಕಲ್ಪನೆ ನೀಡಿ ಒಟ್ಟಾಗಿ ಇರಲು ಉಪದೇಶ ನೀಡಿದ ಮನುವನ್ನು ಹೀಗೆನ್ನುವರು.(4)
18) ಭಗವಂತನನ್ನು ಪೂಜಿಸುವಾಗ ಜನ್ಮ,ಜರಾ,ಮೃತ್ಯು ವಿನಾಶಕ್ಕಾಗಿ ಅರ್ಪಿಸುವ ದ್ರವ್ಯ ತಿರುಗಿದೆ (2)
19) ವರ್ತಮಾನಕಾಲದ 24 ತೀರ್ಥಂಕರರಲ್ಲಿ ವಿಮಲ ತೀರ್ಥಂಕರರ ಯಕ್ಷಿ (3)



ರಚನೆ : **ಎ.ಸಿ.ಇಂದಿರಾ ಜಯಕುಮಾರ್, ಶ್ರವಣಬೆಳಗೊಳ**

**ಧಾರ್ಮಿಕ ಜಿನ ಪದಬಂಧ–01ರ ಉತ್ತರಗಳು**

ಮೇಲಿನಿಂದ ಕೆಳಕ್ಕೆ

1) ಅಜಿತ 2) ಸಿದ್ಧಾರ್ಥರಾಜ 3) ಹೊಂಬುಜ 4) ಅಶೋಕವೃಕ್ಷ 6) ತ್ರಸಿತ 8) ಶ್ರಮಣ 11) ಸ್ತ್ರೀವೇದ 12) ಹಸ್ತಿನಾಪುರ 13) ಗೌತಮ 14) ಅವಮೋದರ್ಯ 16) ರಸನ 18) ಕಾಕಿಣಿ

ಎಡದಿಂದ ಬಲಕ್ಕೆ

2) ಸಿದ್ಧಾಣಂ 4) ಅನಪ್ಪ್ಯ 5) ತತ್ವಾರ್ಥ ಸೂತ್ರ 7) ಜನ್ಮಕಲ್ಯಾಣ 9) ಕಲ್ಪಜ 10) ಸುಭೀಕ್ಷ 12) ಹರಿತ್ 14 ಅಧರ್ಮ 15) ದರ್ಶನಾಚಾರ 17) ಗೌತಮೋಗಣಿ 19) ಮಕರ 20) ಆಚಾರ್ಯ

## ಅಚ್ಚಳಿಯದ ಅಮೃತಮಯಿ ಆಚಿಯಕ್ಕ

'ಆಚಿಯಕ್ಕ' ಎಂದೇ ಪ್ರಸಿದ್ಧಳಾದ ಆಚಲಾದೇವಿ, ಮಾಸವಾಡಿ ನಾಡಿನ ಸೋವಣನಾಯಕ ಮತ್ತು ಬಾಚವ್ವೆ ಎಂಬ ಜೈನ ಶ್ರೇಷ್ಠ ಶ್ರಾವಕ ದಂಪತಿಗಳ ಸುಪುತ್ರಿ. ಆಚಿಯಕ್ಕ ತಂದೆ ತಾಯಿಯಂತೆ ಸ್ವಧರ್ಮ ನಿಷ್ಠೆ, ಪರಧರ್ಮಸಹಿಷ್ಣೆ, ಶಿವನಲ್ಲಿ ಜಿನನನ್ನು: ಜಿನನಲ್ಲಿ ಶಿವನನ್ನು ಕಂಡು ಸಂತೃಪ್ತಿಯನ್ನುಂಡ ಬದುಕಿದ ಸದ್ಗುಣ ಸುಶೀಲೆ. ಅವಳು ಲಾವಣ್ಯದಲ್ಲಿ ಗಂಗೆ, ಅರ್ಹಂತ ಪರಮೇಷ್ಠಿಗಳ ಪಾದದ ಗಂಧೋಧಕದಿಂದ ಜೀವನ ಶ್ರೇಷ್ಠತೆ ಕಂಡು ಕೊಂಡ ಜಿನಪಾದ ಪದ್ಮೆ. ಎಡಬಿಡದೆ ಚತುರ್ವಿದ ದಾನಗಳನ್ನು ಜೀವನದ ಉದ್ದಕ್ಕೂ ಮಾಡಿ ಕೃತಾರ್ಥಳಾದ ಪರಮ ಜಿನ ಭಕ್ತೆ. ಮೂಲಸಂಘ ದೇಸಿ ಗಣ ಪುಸ್ತಕ ಗಚ್ಛದ ಕೊಂಡ ಕುಂದಾನ್ವಯದ ಸಿದ್ಧಾಂತ ಚಕ್ರವರ್ತಿ ಎನಿಸಿದ ನಯಕೀರ್ತಿಗಳ ಶಿಷ್ಯರಾದ ಬಾಲಚಂದ್ರ ಮುನೀಂದ್ರರ ಪರಮ ಭಕ್ತೆ. ಎಲ್ಲಕ್ಕೂ ಮಿಗಿಲಾಗಿ ಹೊಯ್ಸಳ ಸಾಮ್ರಾಜ್ಯದ ವೀರ ಬಲ್ಲಾಳನ ಸಚಿವೋತ್ತಮನಾದ ಚಂದ್ರಮೌಳಿಯ ಮೆಚ್ಚಿನ ಮಡದಿ.

ಚಂದ್ರಮೌಳಿ ಶೈವ ದಂಪತಿಗಳಾದ ಶಂಭುದೇವ ಮತ್ತು ಅಕ್ಕವ್ವೆಯರ ಪ್ರೀತಿಯ ಪುತ್ರ. ಇಂದ್ರನಿಗೆ ಬೃಹಸ್ಪತಿ ಹೇಗೋ ಹಾಗೆ ವೀರಬಲ್ಲಾಳನಿಗೆ ಚಂದ್ರಮೌಳಿ. ವರಮಂತ್ರ ಶಕ್ತಿಯುತ ತರ್ಕವೆಂಬ ಕಮಲಕ್ಕೆ ಸೂರ್ಯ. ನಾನಾ ಕಲಾವಿಶಾರದ, ದ್ವಿಜವಂಶ ಶೋಭಿತ. ಶತ್ರುವೆಂಬ ಮದಗಜಗಳ ಪಾಲಿಗೆ ಸಿಂಹ ಪ್ರಾಯನಾಗಿದ್ದವನು. ಶೈವ ಪಂಥಕ್ಕೆ ಕೀರ್ತಿಶಾಲಿ. ಸದ್ಗುಣದ ತೌರು ಮನೆಯಂತಿದ್ದವನು ಚಂದ್ರಮೌಳಿ. ಇವನ ಆರಾಧ್ಯ ದೈವ ಈಶ್ವರ. ಶೈವನಾದರೂ ಸರ್ವಧರ್ಮ ಸಮನ್ವಯಿಯಾಗಿದ್ದ. ರಾಜನಿಗೆ ತಕ್ಕ ಮಂತ್ರಿಯಾಗಿ ಕುಲಕ್ಕೆ ತಕ್ಕ ದೊರೆಯಾಗಿ, ಧರ್ಮಕ್ಕೆ ತಕ್ಕ ಸೇವಕನಾಗಿ ಬಾಳಿದವನು ಚಂದ್ರಮೌಳಿ.

ಶೈವ–ಜೈನ ಎಂಬ ಪಂಥ ಬೇಧವಿಲ್ಲದೇ, ಆದರ್ಶ ವಿವಾಹವು ನಡೆದುದ್ದಕ್ಕೆ ಒಂದು ಉತ್ತಮ ನಿದರ್ಶನ; ಚಂದ್ರಮೌಳಿ ಮತ್ತು ಆಚಿಯಕ್ಕರ ದಾಂಪತ್ಯ. ಮಾಚಿಕಬ್ಬೆ–ಮಾರಸಿಂಗಮಯ್ಯ, ವಿಷ್ಣುವರ್ಧನ–ಶಾಂತಲೆ ಯರಂತ ಆದರ್ಶ ದಾಂಪತ್ಯಕ್ಕೇ ಸಮನಾಗಿತ್ತು, ಚಂದ್ರಮೌಳಿ– ಆಚಿಯಕ್ಕರ ಜೀವನ. ಆಚಿಯಕ್ಕಳ ಜಿನ ಭಕ್ತಿಗೆ ಚಂದ್ರಮೌಳಿ ಎಂದೂ ಅಡ್ಡಿ ಮಾಡಲಿಲ್ಲ. ತನ್ನ ಮಡದಿ ನೆಡದ ಹಾದಿಯಲ್ಲಿ ನೆಡೆದು ಅವಳ ಹೆಜ್ಜೆಗೆ ಹೆಜ್ಜೆಯಾಗಿ ದಾಂಪತ್ಯದ ಸವಿಯನ್ನುಂಡವನು ಚಂದ್ರಮೌಳಿ, ಜಿನೇಂದ್ರನಲ್ಲಿ ಪರಶಿವನನ್ನು ಕಂಡು: ಪರಶಿವನಲ್ಲಿ ಜಿನೇಂದ್ರರನ್ನು ಕಂಡು ಆನಂದದಿಂದಲೂ, ಭಕ್ತಿಯಿಂದಲೂ ಮಿಂದು ಸಂತಸದಿಂದ ಇದ್ದನು.

ಆ ಗೌರಿಯು ಎಷ್ಟೋ? ತಪಸ್ಸು ಮಾಡಿ ಕೊನೆಗೆ ಈಶ್ವರನನ್ನು ವರಿಸಿದಳು. ಅಂತೆಯೇ ಇಲ್ಲಿ ಚಂದ್ರವೌಳಿಯೇ ಆಚಲಾದೇವಿಯನ್ನು, ಪಡೆಯಲು ಎಡಬಿಡದೆ ತಪಮಾಡಿ ಪಡೆಯಲೇ ಬೇಕೆಂದು ಹಂಬಲಿತನಾಗಿ, ಆಚಿಯಕ್ಕನ ಸೌಂದರ್ಯಕ್ಕೆ, ಧರ್ಮನಿಷ್ಠೆಗೆ, ಸದ್ಗುಣಗಳಿಗೆ, ಅವಳ ಗುರು ಸೇವೆಗೆ ಮನ ಸೋತು, ಅವಳ ಕೈಹಿಡಿದು ಆದರ್ಶ ದಾಂಪತ್ಯಕ್ಕೆ ಹೆಸರಾದವನು ಚಂದ್ರಮೌಳಿ.



ಆಚಿಯಕ್ಕ ಶೈವನಾದ ಚಂದ್ರಮೌಳಿಯನ್ನು ವಿವಾಹವಾದರೂ, ಅನಂತ ಸುಖದ ನೆಲಮನೆಯಾದ ಜಿನೇಶ್ವರನೇ ನನಗೆ ಪರಮ ಆರಾಧ್ಯದೈವ. ಸಿದ್ಧಾಂತ ಚಕ್ರವರ್ತಿ ನಯಕೀರ್ತಿಗಳೇ ತನಗೆ ಸದ್ಗುರು. ಬಾಲ ಚಂದ್ರ ಮುನೀಂದ್ರರ ಪಾದ ಕಮಲಗಳೇ ನನಗೆ ಚಿರ ಸ್ವತ್ತು, ಎಂದು ತಿಳಿದು ನೆಡೆದಳು. ಎಷ್ಟೇ ಕಠಿಣವಾಗಿ ಸ್ವಧರ್ಮ ನಿಷ್ಠೆಯನ್ನು ತೋರಿದರೂ, ತನ್ನ ಪತಿಯ ಧರ್ಮವಾದ ಶೈವ ಪಂಥವನ್ನು ಎಂದೂ ಕೀಳಾಗಿ ಕಾಣಲಿಲ್ಲ. ಸ್ವಧರ್ಮಕ್ಕೆ ಎಷ್ಟು ನಿಷ್ಟಳಾಗಿದ್ದಳೋ; ಅಷ್ಟೇ ನಿಷ್ಠೆಯನ್ನು ತನ್ನ ಪತಿಯ ಧರ್ಮದ ಮೇಲೂ ಹೊಂದಿದ್ದಳು. ಪತಿಯೊಂದಿಗೆ ಶಿವಾಲಯಕ್ಕೆ ಹೋದಾಗ ಶಿವನಲ್ಲಿ ಜಿನೇಂದ್ರನನ್ನು ಕಾಣುತ್ತಿದ್ದಳು, ಪರಶಿವನಲ್ಲಿಯೂ ಪರಮ ಭಕ್ತಿಯನ್ನು ತೋರುತ್ತಿದ್ದಳು. ಹೀಗಾಗಿ ಅವಳು ಎಂದೆಂದಿಗೂ ಅಮೃತಮಯಿ ಎಂದೆನಿಸಿದಳು.

ಶ್ರವಣಬೆಳಗೊಳದಲ್ಲಿನ ಹೊಯ್ಸಳ ವಾಸ್ತುಶಿಲ್ಪದ ಶಿಲ್ಪಸೌಂದರ್ಯವನ್ನು ಪ್ರತಿಬಿಂಬಿಸುವ ಅಕ್ಕನ ಬಸದಿ ಹಾಗೂ ಬಸದಿಯ ಎದುರಿಗಿರುವ ಚಂದ್ರಮೌಳೇಶ್ವರ ದೇಗುಲಗಳು ಆಚಿಯಕ್ಕ ಮತ್ತು ಚಂದ್ರಮೌಳಿಯರ ಆದರ್ಶ ದಾಂಪತ್ಯದ ಕುರುಹಾಗಿ, ಸರ್ವಧರ್ಮ ಸಮನ್ವಯತೆಯ ಜ್ಯೋತಿ ಪುಂಜವಾಗಿ, ಧರ್ಮ ಸಹಿಷ್ಣುತೆಯ ದ್ಯೋತಕವಾಗಿ ನಮಗಿಂದು ಕಾಣಸಿಗುತ್ತವೆ. ಇವೆರಡೂ ದೇಗುಲಗಳಲ್ಲೂ ಕುಲಬೇಧವಿಲ್ಲದೇ, ಜಾತಿ ವಿಜಾತಿ ಎನ್ನದೇ. ಈಗಲೂ ಒಟ್ಟುಗೂಡಿ ಎಲ್ಲರೂ ಪೂಜೆಗೈಯುವ ಶಿವನಲ್ಲಿ ಜಿನನನ್ನು, ಜಿನನಲ್ಲಿ ಶಿವನನ್ನು ಕಾಣುವ ಪರಿಪಾಠ ಹಿಂದಿನಿಂದಲೂ ಮುಂದುವರೆದು ಕೊಂಡು ಬಂದಿರುವುದು ಶ್ಲಾಘನೀಯವೆನಿಸುತ್ತದೆ.

ಶಕವರ್ಷ 1104 ಅಂದರೆಕ್ರಿ.ಶ.1181 ರಲ್ಲಿ ಪ್ಲವ ಸಂವತ್ಸರ ಪುಷ್ಯ ಮಾಸದ ಶುಕ್ರವಾರದ ಉತ್ತರಾಯಣ ಸಂಕ್ರಾಂತಿಯಂದು ಚಂದ್ರ ಮೌಳಿಯು ತನ್ನ ಪ್ರಿಯತಮೆಯಾದ ಆಚಲಾದೇವಿಗಾಗಿ ಶ್ರವಣ ಬೆಳ್ಗೊಳದಲ್ಲಿ ಪಾರ್ಶ್ವನಾಥ ತೀರ್ಥಂಕರರ ಬಸದಿಯನ್ನು ನಿರ್ಮಿಸಿ, ಬಸದಿಯಲ್ಲಿನ ಜಿನರ ಪೂಜೆಗಾಗಿ ಚಂದ್ರಮೌಳಿಯು ವೀರಬಲ್ಲಾಳನಲ್ಲಿ ದಾನ ನೀಡುವಂತೆ ಕೋರಿದಾಗ, ವೀರಬಲ್ಲಾಳನು ಬೊಮ್ಮೇನ ಹಳ್ಳಿಯನ್ನು ದತ್ತಿಯಾಗಿ ಬಿಟ್ಟನು. ಅದನ್ನು ಆಚಲಾದೇವಿಯು ತನ್ನ ಗುರು ಬಾಲಚಂದ್ರರ ಪಾದಪೂಜೆ ಮಾಡಿ ಮಹಾರಾಜ ಬಿಟ್ಟ ದತ್ತಿಯನ್ನು ಜಿನೇಂದ್ರರಿಗೆ ಅರ್ಪಿಸಿದಳು. ಆಚಲಾದೇವಿಯ ಹಂಬಲದಂತೆ ನಿರ್ಮಿಸಲಾದ ಈ ಬಸದಿಯು ಇಂದಿಗೂ 'ಅಕ್ಕನ ಬಸದಿ' ಎಂದೇ ಹೆಸರಾಗಿದ್ದು, ಹೊಯ್ಸಳರ ವಾಸ್ತುಶಿಲ್ಪಎಲ್ಲಾ ಸ್ವರೂಪದ ಲಕ್ಷಣಗಳನ್ನು ಹೊಂದಿದ್ದು, ಜೈನ ಬಸದಿಗಳಲ್ಲೇ ಅತ್ಯಂತ ಕಲಾತ್ಮಕವಾದ ಹಾಗೂ ಆದರ್ಶ ಸ್ಮಾರಕದ ಭಾಗವಾಗಿದೆ. ಅದರಂತೆ ಚಂದ್ರಮೌಳಿಯು ಪಕ್ಕದಲ್ಲಿ ಚಂದ್ರಮೌಳೇಶ್ವರ ದೇಗುಲ ನಿರ್ಮಿಸಿ ಅದರ ಪೂಜಾ ವ್ಯವಸ್ಥೆಗಾಗಿ ಹಲವು ದಾನ ದತ್ತಿಗಳನ್ನು ಬಿಟ್ಟನು.ಇದು ಸಮನ್ವಯತೆಯ ಸಂಕೇತವಾಗಿದೆ.

ಹೀಗೆ ಶ್ರವಣಬೆಳಗೊಳದಲ್ಲಿ ಜಿನಾಲಯ ಮತ್ತು ಶಿವಾಲಯಗಳನ್ನು ನಿರ್ಮಿಸಿ, ದಾನದತ್ತಿಗಳನ್ನು ನೀಡಿ, ಮುತ್ತಿನ ಹಾರದಂತೆ, ಕೈಲಾಸದಂತೆ, ಶಿವನ ಬೆಳ್ನಗೆಯಂತೆ ತನ್ನ ಕೀರ್ತಿ ಚಂದ್ರಿಕೆಯನ್ನು ಆಚಿಯಕ್ಕ ಮತ್ತು ಚಂದ್ರಮೌಳಿಯರು ಮೂರು ಲೋಕದಲ್ಲಿ ಹರಡಿದರು. ಆಚಿಯಕ್ಕ ಪತಿಯ ಆಣತಿಯಂತೆ ನೆಡೆದೂ, ತಾನು ನಂಬಿದ ಧರ್ಮಕ್ಕೂ, ಪತಿಯ ಧರ್ಮಕ್ಕೂ ನಿಷ್ಠೆಯಾಗಿದ್ದು, ಆದರ್ಶಮಯಿಯಾಗಿದ್ದು, ಕುಲಕ್ಕೆ ತಕ್ಕ ಮಗಳಾಗಿ, ಅತ್ತೆಗೆ ತಕ್ಕ ಸೊಸೆಯಾಗಿ, ಪತಿಗೆ ತಕ್ಕ ಸತಿಯಾಗಿ, ಶಿವನ ದಿಗಂಬರ ರೂಪವನ್ನು ಧ್ಯಾನಿಸುತ್ತಾ ಜಿನನ್ನು ಅವನಲ್ಲಿ ಸಮಾವೇಶ ಗೊಳಿಸುತ್ತಾ, ಪರಧರ್ಮ ಸಹಿಷ್ಣೆಯಾಗಿ, ಪರಮ ನಿಷ್ಠೆಯಿಂದ ಪೂಜಿಸಿ ಅಮೃತಮಯಿ ಎನಿಸಿ ಆದರ್ಶ ಮಹಿಳೆಯ ನಿದರ್ಶನವಾಗಿ ಇಂದಿಗೂ ಅಚ್ಚಳಿಯದೆ ಜನರ ಸ್ಮರಣೆಯಲ್ಲಿ ಉಳಿದಿದ್ದಾಳೆ. ಆಚಿಯಕ್ಕನ ಆದರ್ಶಗಳನ್ನು, ಸದ್ಗುಣಗಳನ್ನು, ಅವಳ ರೂಪ ಲಾವಣ್ಯಗಳನ್ನು ನಾವು ಇಂದಿಗೂ ಶ್ರವಣಬೆಳಗೊಳದ ಅಕ್ಕನ ಬಸದಿಯ ಶಿಲೆಯ ಒಂದೊಂದು ಕಣಕಣಗಳಲ್ಲಿ ಕಾಣಬಹುದು. ನಮ್ಮನ್ನು ಮೂಕವಿಸ್ಮಿತರನ್ನಾಗಿಸುವ ಅಕ್ಕನ ಬಸದಿಯಲ್ಲೊಮ್ಮೆ ಅವಳನ್ನು ನೋಡಿ ಬನ್ನಿ: ಅವಳ ಆದರ್ಶ ಗುಣಗಳನ್ನು ನೆನೆದು ಬನ್ನಿ.

ಲೇಖನ : ವೀರೇಂದ್ರ ಬೇಗೂರು.
ಪೋಟೋ : ಶಶಿದರ್ ಹೆಚ್ ಜಿ.

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು : ಪಂಡಿತ ರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್ ವತಿಯಿಂದ 2023–24ನೇ ಸಾಲಿನ ವಿದ್ಯಾರ್ಥಿ ವೇತನಕ್ಕಾಗಿ ಈ ಕೆಳಕಂಡ ವಿಷಯಗಳಲ್ಲಿ ಬಿ.ಇ. ಹಾಗೂ ಸ್ನಾತಕೋತ್ತರ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

1) ಕರ್ನಾಟಕದ ಯಾವುದೇ ವಿ.ವಿ.ಗಳಲ್ಲಿ ಜೈನಾಲಜಿ, ಪ್ರಾಕೃತ ಜೈನಾಗಮ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು.
2) ಶಾಸ್ತ್ರಿಗಳ ಜೀವನ ಮತ್ತು ಸಾಹಿತ್ಯದ ವಿಷಯದಲ್ಲಿ ಸಂಶೋಧನೆ ಹಾಗೂ ಮಹಾಪುರಾಣದ ವಿಭಿನ್ನ ವಿಷಯಗಳ ಬಗ್ಗೆ ತೌಲನಿಕ ಅಧ್ಯಯನ ಸಂಶೋಧನೆ ನಡೆಸುವ ವಿದ್ಯಾರ್ಥಿಗಳು.
3) ಕರ್ನಾಟಕದಲ್ಲಿ ಕನ್ನಡ, ಸಂಸ್ಕೃತ, ಪ್ರಾಕೃತ ವಿಷಯದಲ್ಲಿ ಎಂ.ಎ. ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು.
4) ಸಂಗೀತ, ಭಜನೆ, ಜಿನಭಕ್ತಿ ಗೀತಗಾಯನದಲ್ಲಿ ಅಭಿರುಜಿ ಇದ್ದು ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳು.

5ರೂ. ಸ್ಟಾಂಪ್ ಹಚ್ಚಿದ ಸ್ವ–ವಿಳಾಸ ಬರೆದ ಕವರ್‌ನೊಂದಿಗೆ ಸ್ವ–ವಿವರದ ಅರ್ಜಿ ಈ ಕೆಳಗಿನ ವಿಳಾಸಕ್ಕೆ ದಿನಾಂಕ : 20–10–2023 ರೊಳಗೆ ಕಳುಹಿಸಿ ಅರ್ಜಿ ಫಾರಂ ಪಡೆಯಬಹುದು. ವಿಳಾಸ : **ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್ (ರಿ), ನಂ. 369, 42ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, ಬೆಂಗಳೂರು–560 070**

### ಜೈನ ಸಂಸ್ಕೃತಿಯ ಉನ್ನತಿಗೆ ಆಚಾರ್ಯ ವಿದ್ಯಾನಂದರ ಕೊಡುಗೆ ಕುರಿತು ಪ್ರಾಕೃತ ಸಂಸ್ಥೆಯಲ್ಲಿ ಉಪನ್ಯಾಸ



ಶ್ರವಣಬೆಳಗೊಳ. ಸೆ. 23 : ಬಾಹುಬಲಿ ಪ್ರಾಕೃತ ವಿದ್ಯಾಪೀಠ ಅಂತರ್ಗತ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಜೈನ ಸಂಸ್ಕೃತಿಯ ಉನ್ನತಿಗೆ ಆಚಾರ್ಯ ವಿದ್ಯಾನಂದರ ಕೊಡುಗೆ ವಿಷಯದ ಬಗ್ಗೆ ಸಂಸ್ಥೆಯ ಪೂರ್ವ ನಿರ್ದೇಶಕರು ಮತ್ತು ಹಿರಿಯ ವಿದ್ವಾಂಸರಾದ ಡಾ. ಎಸ್.ಪಿ. ಪಾಟೀಲ್ ಉಪನ್ಯಾಸ ನೀಡಿದರು. ನಿರ್ದೇಶಕರಾದ ಪ್ರೊ. ಜಯಕುಮಾರ ಉಪಾಧ್ಯೆರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

### ಪ್ರಾ.ಕೃ.ಪ.ಸ. ಸಂಘಕ್ಕೆ ಆಯ್ಕೆ



ಬೆಳಗಾವಿ : ರಾಯಭಾಗ ತಾಲ್ಲೋಕಿನ ಪಾಲಭಾವಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ಮಹಿಳಾ ಪ್ರತಿನಿಧಿಯಾಗಿ **ಶ್ರೀಮತಿ ಕೃಷ್ಣಾಬಾಯಿ ಅಣ್ಣಾಸಾಬ ಪಾಟೀಲ**ರವರು ಎರಡನೇ ಬಾರಿಗೆ ಆಯ್ಕೆಯಾಗಿರುತ್ತಾರೆ.

### ಉನ್ನತ ವ್ಯಾಸಂಗಕ್ಕೆ ಆಯ್ಕೆ



ಧಾರವಾಡ : ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ **ರೂಪಾ ಸುರೇಂದ್ರ ಪರವಾಪೂರ**ರವರು (ಕಲಘಟಗಿಯ ತಂಬೂರ ಗ್ರಾಮದ ಶಿಲ್ಪಾ ಹಾಗೂ ಸುರೇಂದ್ರ ಪರವಾಪುರರವರ ಪುತ್ರಿ) ಥೈಲ್ಯಾಂಡಿನ ಕ್ವೀನ್ ಸಿರಿ ಕಿಟ್ ಬೋಟಾ ನಿಖಿಲ್ ಗಾರ್ಡನ್ ಸಂಸ್ಥೆಯಲ್ಲಿ ವಿಶೇಷ ಅಧ್ಯಯನ, ವ್ಯಾಸಂಗ ಮಾಡಲು ಆಯ್ಕೆಯಾಗಿದ್ದಾರೆ.

### ಬಾಹುಬಲಿ ಸ್ಕೂಲ್ ಆಫ್ ನರ್ಸಿಂಗ್‌ನಲ್ಲಿ ಅಭಿವಿನ್ಯಾಸ ಕಾರ್ಯಕ್ರಮ




**ಶ್ರವಣಬೆಳಗೊಳ, ಸೆ. 25 :** ಬಾಹುಬಲಿ ಸ್ಕೂಲ್ ಆಫ್ ನರ್ಸಿಂಗ್‌ನಲ್ಲಿ ಈ ಸಾಲಿಗೆ ಪ್ರವೇಶ ಪಡೆದಿರುವ ನೂತನ ವಿದ್ಯಾರ್ಥಿಗಳಿಗೆ **ಅಭಿವಿನ್ಯಾಸ ಕಾರ್ಯಕ್ರಮ**ವನ್ನು ಹಮ್ಮಿಕೊಳ್ಳಲಾಗಿತ್ತು. ಚನ್ನರಾಯಪಟ್ಟಣದ ಮಂಗಳೂರು ಪಿಯು ಕಾಲೇಜಿನ ಕಾರ್ಯದರ್ಶಿ ಪ್ರದೀಪ್ ವಿಶೇಷ ಅತಿಥಿಯಾಗಿ ಆಗಮಿಸಿ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳಿಗೆ ಹಾಗೂ ಅವರ ಪೋಷಕರಿಗೆ ನರ್ಸಿಂಗ್ ಕೋರ್ಸ್ ನ ಪ್ರಾಮುಖ್ಯತೆಯನ್ನು ತಿಳಿಸಿಕೊಟ್ಟರು. ಎಸ್‌ಎಸ್‌ಡಿಜೆಜೆಪಿ ಸಂಘದ ಕಾರ್ಯದರ್ಶಿ ಬಬನ್ ಪಾರಿಸ್ ದತವಾಡೆ, ಪ್ರಾಂಶುಪಾಲರಾದ ಡಿ.ವಿ ಪವಿತ್ರ, ಬಾಹುಬಲಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಸುನಿಲ್ ಕುಮಾರ್ ಡಿ. ಬಾಹುಬಲಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲೆ ಜಾನಕಿ ಜಿ. ಕೆ. ಉಪಸ್ಥಿತರಿದ್ದರು. ನಂತರ ಬಾಹುಬಲಿ ಆಸ್ಪತ್ರೆಯಲ್ಲಿ ವಿದ್ಯಾರ್ಥಿಗಳಿಗೆ ಉದ್ಯೋಗಗಳ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳಾದ ಡಾ. ವಿಜಯಕುಮಾರ್ ಹಾಗೂ ಡಾ. ರಾಮಚಂದ್ರ, ಡಾ. ಕಾವ್ಯ ಉಪಸ್ಥಿತರಿದ್ದರು.

### ಪುಣ್ಯಸ್ಮರಣೆ



**ಶ್ರೀಮತಿ ಚಂದ್ರಕಲಾ**
ಬೆಳ್ಳೂರು
ಜನನ : 10–06–1952 ನಿಧನ : 10–10–2021

ನೀವು ನಮ್ಮನ್ನಗಲಿ ಎರಡು ವರ್ಷಗಳು ಸಂದರೂ ನಿಮ್ಮ ನೆನಪು ಹಚ್ಚ ಹಸಿರಾಗಿದೆ.
ಅಗಲಿದ ಆತ್ಮನಿಗೆ ಚಿರಶಾಂತಿಯನ್ನು ಕೋರುವ
ದಿ. ಶ್ರೀಮತಿ ಸ್ವಯಂಪ್ರಭ ಮತ್ತು ದಿ. ಶ್ರೀ ಮಿಠಾಯಿ ಜಿನ್ನಪ್ಪನವರ ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು ಪ್ರಕಾಶ ಬೇಕರಿ & ಸ್ವೀಟ್ಸ್, ಮಹಾವೀರ ರಸ್ತೆ, ಬೆಳ್ಳೂರು. ಮಂಡ್ಯ ಜಿಲ್ಲೆ.

### ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ದೇವರಾಜ್ ಎಂ. ಪಿಡ್ಡಿ**
ನಿವೃತ್ತ ತಹಸೀಲ್ದಾರ್, ಗದಗ
ಜನನ : 10–04–1946 ನಿಧನ : 25–08–2023

ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದೆ. ನೀವು ತೋರಿದ ಆದರ್ಶಗಳು ನಮಗೆ ದಾರಿದೀಪವಾಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಪ್ರಾರ್ಥಿಸುತ್ತೇವೆ.
ದುಃಖ ಭಾಗಿಗಳು
ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಫಿಡ್ಡಿ ಕುಟುಂಬ ವರ್ಗ, ಗದಗ


### ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಎಂ.ಬಿ. ಅನಂತರಾಜಯ್ಯ**
ಮಾಜಿ ಅಧ್ಯಕ್ಷರು, ಜೈನ ಸಮಾಜ, ಮಾಯಸಂದ್ರ
ಜನನ : 01–01–1941 ನಿಧನ : 15–09–2023

ಕಳೆದ 35 ವರ್ಷಗಳಿಂದ ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೋಕು ಮಾಯಸಂದ್ರ ದಿಗಂಬರ ಜೈನ ಸಮಾಜದ ಅಧ್ಯಕ್ಷರಾಗಿ ಅವಿರತ ಸೇವೆ ಸಲ್ಲಿಸಿರುತ್ತಾರೆ. ಅಗಲಿದ ಆತ್ಮಕ್ಕೆ ಚಿರಶಾಂತಿಯನ್ನು ಪ್ರಾರ್ಥಿಸುವ – ದುಃಖ ಭಾಗಿಗಳು
ಎಂ.ಬಿ. ಕುಟುಂಬ ವರ್ಗ, ಮಾಯಸಂದ್ರ

### ಸಮಾಜರತ್ನ ಎಂ. ಸಿ. ಅನಂತರಾಜಯ್ಯ ಜನ್ಮ ಶತಮಾನೋತ್ಸವ



ಬೆಂಗಳೂರು : ಜೈನಧರ್ಮ ಭೂಷಣ, ಸಮಾಜರತ್ನ, ಶ್ರಾವಕ ಶಿರೋಮಣಿ ಮೊದಲಾದ ಪ್ರಶಸ್ತಿಗಳಿಗೆ ಪಾತ್ರರಾಗಿದ್ದ ಶ್ರೀ **ಎಂ. ಸಿ. ಅನಂತರಾಜಯ್ಯ** ಅವರ **ಜನ್ಮಶತಮಾನೋತ್ಸವ**ವನ್ನು ದಿನಾಂಕ : 20–01–2024ರಂದು ಬೆಂಗಳೂರಿನ ಕರ್ನಾಟಕ ಜೈನ ಭವನದಲ್ಲಿ ಆಚರಿಸಲು ನಿರ್ಧರಿಸಲಾಗಿದ್ದು, ಈ ಸಂದರ್ಭದಲ್ಲಿ ಸ್ಮರಣ ಸಂಚಿಕೆಯನ್ನು ಲೋಕಾರ್ಪಣೆ ಮಾಡಲಾಗುತ್ತಿದೆ ಎಂದು ವಿಮುಕ್ತ್ ಕುಮಾರ್ ಜೈನ್‌ರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ಶ್ರೀ ಎಂ. ಸಿ. ಅನಂತರಾಜಯ್ಯರವರು ಜೈನಧರ್ಮ, ಸಾಹಿತ್ಯ, ಸಂಸ್ಕೃತಿಗಳ ಪ್ರಭಾವನೆಗೆ ವಿಶೇಷ ಆಸಕ್ತಿ ಹೊಂದಿದ್ದರು. ಬಸದಿಗಳ ಜೀರ್ಣೋದ್ಧಾರ, ಬಸದಿಗಳ ನಿರ್ಮಾಣ, ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವ, ತ್ಯಾಗಿಗಳ ವಿಹಾರ, ಮಹಾಮಸ್ತಕಾಭಿಷೇಕ ಮೊದಲಾದ ಕಾರ್ಯಗಳಲ್ಲಿ ತನು, ಮನ, ಧನಗಳಿಂದ ಸೇವೆ ಸಲ್ಲಿಸಿರುವ ಶ್ರೀಯುತರು ಉತ್ತರ ಮತ್ತು ದಕ್ಷಿಣ ಭಾರತ ಜೈನ ಸಮಾಜಗಳ ಸಂಪರ್ಕ ಸೇತುವೆಯಂತಿದ್ದರು. ಆಚಾರ್ಯ ಶ್ರೀ ವಿದ್ಯಾನಂದ ಮುನಿ ಮಹಾರಾಜರ ಅನನ್ಯ ಭಕ್ತರಾಗಿದ್ದ ಅವರು ಆಚಾರ್ಯ ಶ್ರೀಯವರ ದೆಹಲಿಯಿಂದ ಶ್ರವಣಬೆಳಗೊಳದವರೆಗಿನ ದಕ್ಷಿಣಾಪಥ ವಿಹಾರವನ್ನು ಸಂಘಟಿಸಿದ್ದರು.

## ಅಭಿನಂದನೆಗಳು



**ಡಾ. ಅಜಿಂಕ್ಯಾ ರೇವಟಕರ್** NIMHANS, Bengaluru

ಇವರಿಗೆ ಸೆಪ್ಟೆಂಬರ್ 16 ಮತ್ತು 17ರಂದು ಮುಂಬಯಿಯಲ್ಲಿ ಜರುಗಿದ 12ನೇ ವರ್ಲ್ಡ್ ಫೆಡರೇಷನ್ ಆಫ್ ನ್ಯೂರೋಸರ್ಜರಿ ಸಮ್ಮೇಳನದಲ್ಲಿ ಯಂಗ್ ನ್ಯೂರೋಸರ್ಜನ್–2023 ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ ಮತ್ತು Evaluation of the Surgical outcome and Predictive factors and development of predictive score for Seizure freedom among people with Long term Epilepsy association tumors (LEAT) ವಿಷಯದ ಬಗ್ಗೆ ಮಂಡಿಸಿದ ಪ್ರಬಂಧಕ್ಕೆ ಪ್ರಥಮ ಬಹುಮಾನಕ್ಕೆ ಭಾಜನರಾಗಿದ್ದಾರೆ.

ಶುಭ ಕೋರುವವರು : ಡಾ.ಆದಿನಾಥ್ (ಮಾವ),
ಡಾ. ಪದ್ಮ (ಅತ್ತೆ), ಡಾ. ಅಂಜಲಿ ಅಜಿಂಕ್ಯಾ ರೇವಟಕರ್ (ಪತ್ನಿ),
ಸ್ಕ್ವಾಡ್ರನ್ ಲೀಡರ್ ಮಾನಸ, ವಿಂಗ್ ಕಮಾಂಡರ್
ರೋಹಿತ್, ಮಾಸ್ಟರ್ ಅರ್ಹನ್ ಮತ್ತು ಬಂಧು ಮಿತ್ರರು

## ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಶ್ರೀ ಮದನಂತನಾಥ ನೋಂಪಿ ಸಂಪನ್ನ



**ಶ್ರವಣಬೆಳಗೊಳ. ಸೆ. 27 :** ಶ್ರೀಕ್ಷೇತ್ರದಲ್ಲಿ ಮೂರು ದಿನಗಳ ಶ್ರೀ ಮದನಂತನಾಥ ನೋಂಪಿ ವ್ರತವು ಸಂಪನ್ನಗೊಂಡಿತು. ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ವ್ರತಿಕರಿಗೆ ಕಂಕಣ ಕಟ್ಟಿದರು. 60 ವ್ರತಿಕರು ನೋಂಪಿಯಲ್ಲಿ ಪಾಲ್ಗೊಂಡಿದ್ದರು.



## ಆಯುರ್ವೇದದಿಂದ ಸ್ವಾಸ್ಥ್ಯ ಸಮಾಜದ ನಿರ್ಮಾಣ ಸಾಧ್ಯ – ಹೊಂಬುಜ ಶ್ರೀ



**ಹೊಂಬುಜ :** ನಿತ್ಯ ಜೀವನದಲ್ಲಿ ಆಯುರ್ವೇದ ಪದ್ಧತಿಯನ್ನು ಆಹಾರದಲ್ಲಿ ಮತ್ತು ವಿಹಾರಗಳಲ್ಲಿ ಬಳಸಿಕೊಳ್ಳಬೇಕಾದ ಅಗತ್ಯವಿದೆ. ಆಧುನಿಕ ಜನಜೀವನದ ಜಂಜಾಟದಲ್ಲಿ ಭಾರತೀಯ ಅನಾದಿ, ಸನಾತನ ವೈದ್ಯ ಪದ್ಧತಿ, ಆಯುರ್ವೇದ ಪ್ರಸಕ್ತ ವಿಶ್ವಮಾನ್ಯವಾಗಿದೆ. ಸರ್ವರೋಗಗಳಿಗೂ ಚಿಕಿತ್ಸಾ ಪರಿಹಾರ ಉಲ್ಲೇಖಿಸಿದ ಋಷಿಮುನಿಗಳು ಪ್ರತಿಯೋರ್ವರ ಆರೋಗ್ಯ ರಕ್ಷಣೆಗೆ ಪರಿಸರದ ಗಿಡಮೂಲಿಕೆಗಳ ಬಳಕೆಯನ್ನು ದಾಖಲಿಸಿರುವುದನ್ನು ಸಂಶೋಧನಾ ವಿದ್ಯಾರ್ಥಿಗಳು ಇನ್ನಷ್ಟು ಅಧ್ಯಯನ ಮಾಡಬೇಕು ಎಂದು ಹೊಂಬುಜ ಜೈನ ಮಠದ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ತಿಳಿಸಿದರು. ಒಂದು ವಾರ ಅವಧಿಯಲ್ಲಿ ಜರುಗುವ 'ದೃಢಬಲ' ಆಯುರ್ವೇದ ಶಿಬಿರ ಉದ್ಘಾಟಿಸಿ ಜೈನ ಆಯುರ್ವೇದ ಪದ್ಧತಿ, ಔಷಧ ತಯಾರಿಕೆ, ಕುಂದಾದ್ರಿ ಬೆಟ್ಟದ ಅಮೂಲ್ಯ ಗಿಡಮೂಲಿಕೆಗಳ ಕುರಿತು ಶ್ರೀಗಳು ಉಲ್ಲೇಖಿಸುತ್ತಾ ಪೂಜ್ಯಪಾದ ಮುನಿಶ್ರೀಗಳ ಚಿಕಿತ್ಸಾ ಪದ್ಧತಿ ಸಂಶೋಧನೆಗೆ ಯೋಗ್ಯವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ವೈದ್ಯರಾದ ಡಾ. ಜೀವಂಧರ ಜೈನ್ ಉಪಸ್ಥಿತರಿದ್ದು ಮಾತನಾಡಿದರು. ಡಾ. ಅರ್ಹಂತ್ ಕುಮಾರ್ ಎ. ಡಾ. ಆನಂದ ಕಟ್ಟಿಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶಿಬಿರದಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಪ್ರತಿಷ್ಠಾ ಮಹೋತ್ಸವ ಹಾಗೂ ಶ್ರೀ ಚಕ್ರೇಶ್ವರಿ ಮಹಿಳಾ ಸಮಾಜದ ಸುವರ್ಣ ಮಹೋತ್ಸವ



**ಬೆಂಗಳೂರು. ಸೆ. 10 :** ಜಯನಗರ ಆನೆಬಂಡೆ ರಸ್ತೆಯಲ್ಲಿರುವ ಭಗವಾನ್ ಶ್ರೀ 1008 ಆದಿನಾಥ ಜಿನಮಂದಿರದಲ್ಲಿ 28ನೇ ಪ್ರತಿಷ್ಠಾ ಮಹೋತ್ಸವ ಹಾಗೂ ಶ್ರೀ ಚಕ್ರೇಶ್ವರಿ ಮಹಿಳಾ ಸಮಾಜದ ಸುವರ್ಣ ಮಹೋತ್ಸವ ಕಾರ್ಯಕ್ರಮವು ಪ.ಪೂ. ಮುನಿಶ್ರೀ 108 ವೀರಸಾಗರ ಮುನಿಮಹಾರಾಜರ ಪಾವನ ಸಾನಿಧ್ಯ ಹಾಗೂ ಹೊಂಬುಜ ಜೈನ ಮಠದ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಸಾನಿಧ್ಯದಲ್ಲಿ ವಿಜೃಂಭಣೆಯಿಂದ ನೆರವೇರಿತು. ಅಲ್ಪಸಂಖ್ಯಾತ ಇಲಾಖೆಯ ಅಪರಮುಖ್ಯ ಕಾರ್ಯದರ್ಶಿಗಳಾದ ಶ್ರೀ ಮನೋಜ್ ಜೈನ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಸದಸ್ಯರಾದ ಧನ್ಯಕುಮಾರ ಗುಂಡೆಯವರು ಸುವರ್ಣ ಸಂಭ್ರಮದ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಭಾರತೀಯ ಜೈನ್ ಮಿಲನ್ ರಾಷ್ಟ್ರೀಯ ಕಾರ್ಯಾಧ್ಯಕ್ಷರಾದ ಶ್ರೀ ಧರ್ಮಸ್ಥಳ ಸುರೇಂದ್ರ ಕುಮಾರ್‌ರವರು, ಭಾರತೀಯ ಜೈನ ಮಿಲನ್ ಮಹಿಳಾ ವಿಭಾಗದ ಅಧ್ಯಕ್ಷರಾದ ಶ್ರೀಮತಿ ಅನಿತಾ ಸುರೇಂದ್ರ ಕುಮಾರ್, ಚಕ್ರೇಶ್ವರಿ ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ವೈಜಯಂತಿ ಜ್ವಾಲಕುಮಾರ್ ಉಪಸ್ಥಿತರಿದ್ದರು. ಸುವರ್ಣ ಜೈನ ಮಹಿಳಾ ಕವಿಗೋಷ್ಠಿಯಲ್ಲಿ 8 ಜನ ಕವಿಯತ್ರಿಯರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ವಿತರಣೆ



**ಬೆಳ್ತಂಗಡಿ :** ಪಟ್ಟಣದ ಜೈನಪೇಟೆಯ ರತ್ನತ್ರಯ ತೀರ್ಥಕ್ಷೇತ್ರದಲ್ಲಿ ಕೆಲ್ಲಗುತ್ತು ಸಬರಬೈಲು ಕಿನ್ಯಮ್ಮ ಯಾನೆ ಗುಣವತಿ ಅಮ್ಮನವರ 34ನೇ ಪುಣ್ಯ ತಿಥಿ ಅಂಗವಾಗಿ ಟ್ರಸ್ಟ್‌ನ ವತಿಯಿಂದ ಕೊಡಮಾಡುವ ವಿದ್ಯಾರ್ಥಿ ಪ್ರೋತ್ಸಾಹ ಧನವನ್ನು ಹೊಂಬುಜ ಜೈನ ಮಠದ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರ ಕೀರ್ತಿ ಭಟ್ಟಾರಕ ಸ್ವಾಮೀಜಿಯವರು 704 ವಿದ್ಯಾರ್ಥಿಗಳಿಗೆ 17,51,500 ರೂಗಳನ್ನು ವಿತರಿಸಿ ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ಕಿನ್ಯಮ್ಮ ಯಾನೆ ಗುಣವತಿ ಅಮ್ಮನವರ ಕುಟುಂಬಸ್ಥರು ಉಪಸ್ಥಿತರಿದ್ದರು.

**ಬೆಂಗಳೂರು : ಪ.ಪೂ. ಮುನಿಶ್ರೀ 108 ವೀರಸಾಗರ ಮುನಿಮಹಾರಾಜರ ದಿವ್ಯ ಸಾನಿಧ್ಯದಲ್ಲಿ ಕರ್ನಾಟಕ ಜೈನ ಭವನದಲ್ಲಿ ದಶಲಕ್ಷಣ ಮಹಾಪರ್ವ ಹಾಗೂ ಶ್ರೀ ಚೈತ್ಯಚಕ್ರ ಮಹಾಮಂಡಲ ಆರಾಧನಾ ಮಹೋತ್ಸವ ಜರುಗಿತು.**



## ಜೈನಭವನ ನಿರ್ಮಾಣಕ್ಕೆ ಭೂಮಿ ಪೂಜೆ



**ಹಾನಗಲ್. ಸೆ. 11 :** ಕರಗುದರಿ ಗ್ರಾಮದಲ್ಲಿ ನೂತನ ಜೈನಭವನ ನಿರ್ಮಾಣಕ್ಕೆ ಭೂಮಿ ಪೂಜೆ ಕಾರ್ಯಕ್ರಮವು ಪ.ಪೂ. 105 ವೀರಮತಿ ಮಾತಾಜಿಯವರು ಹಾಗೂ ಸ್ವಾದಿ ಜೈನಮಠದ ಪ.ಪೂ. ಸ್ವಸ್ತಿಶ್ರೀ ಭಟ್ಟಾಕಲಂಕ ಭಟ್ಟಾಚಾರ್ಯವರ್ಯ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಜರುಗಿತು. ಕಾರ್ಯಕ್ರಮದಲ್ಲಿ ತಾಲೂಕು ಹಾಗೂ ಗ್ರಾಮದ ಜೈನ ಮುಖಂಡರುಗಳು ಉಪಸ್ಥಿತರಿದ್ದರು.




## ಪ್ರತಿಭಾ ಕಾರಂಜಿಯಲ್ಲಿ ವಿದ್ಯಾರ್ಥಿಗಳ ಸಾಧನೆ







**ಶ್ರವಣಬೆಳಗೊಳ : ಹೋಬಳಿ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ವಿಜೇತರಾದ ಎಸ್.ಎನ್. ಪ್ರೌಢಶಾಲೆ, ಶ್ರೀ ಅಂಬಿಕಾ ಆಂಗ್ಲಮಾಧ್ಯಮ ಪ್ರೌಢಶಾಲೆ, ಮತ್ತು ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು**

## ಸರ್ವಸದಸ್ಯರ ವಾರ್ಷಿಕ ಸಭೆ




**ಹೂವಿನಹಡಗಲಿ. ಸೆ. 23 :** ಮಹಾವೀರ ಅಲ್ಪಸಂಖ್ಯಾತರ ಪತ್ತಿನ ಸಹಕಾರ ಸಂಘದ 2023ನೇ ಸಾಲಿನ ವಾರ್ಷಿಕ ಮಹಾಸಭೆಯು ಪಟ್ಟಣದ ಮಹಾವೀರ ಭವನದಲ್ಲಿ ನೆರವೇರಿತು. 1997ರಲ್ಲಿ ಸಹಕಾರ ತತ್ತ್ವಗಳೊಂದಿಗೆ ಪ್ರಾರಂಭಗೊಂಡ ಸಂಘವು 25 ವಸಂತಗಳನ್ನು ಪೂರೈಸಿ ರಜತಮಹೋತ್ಸವ ಆಚರಿಸಿಕೊಂಡಿದೆ.



## ಬಾಹುಬಲಿ ತಾಂತ್ರಿಕ ಮಹಾವಿದ್ಯಾಲಯ ಹಾಗೂ ಬಾಹುಬಲಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಅಭಿಯಂತರರ ದಿನಾಚರಣೆ

**ಶ್ರವಣಬೆಳಗೊಳ, ಸೆ.15 :** ಬಾಹುಬಲಿ ತಾಂತ್ರಿಕ ಮಹಾವಿದ್ಯಾಲಯ ಹಾಗೂ ಬಾಹುಬಲಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರ ಜನ್ಮ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಅಭಿಯಂತರರ ದಿನಾಚರಣೆ ಕಾರ್ಯಕ್ರಮದಲ್ಲಿ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಪಾವನ ಸಾನ್ನಿಧ್ಯ ವಹಿಸಿ ಉತ್ತಮ ಭವಿಷ್ಯ ನಿರ್ಮಾಣವಾಗಲಿ ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿ ಮಕ್ಕಳಿಗೆ ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ ಪೆನ್ ಮತ್ತು ಸಿಹಿ ಹಂಚಿದರು.

Edited, Printed & Published by : Charukeerthi Bhattaraka Swamiji and Owned by Shri Digambar Jain Matha, S.D.J.M.I. Managing Committee Trust (R), Shravanabelagola-573 135.
Printer : Omkar Offset Printers, Bangalore Email : gommatavani1980@gmail.com Gommatavani Office Contact No. : 8660118443